ಇವೆಲ್ಲಾ ನನ್ನ ಸನ್ನಿವೇಶದಲ್ಲಿ ಇದ್ದವು. ಮೊದಲೇ ಇದ್ದವು. ನನ್ನನ್ನು ಸೆಳೆದವು. ಈ ಸೆಳೆತಗಳನ್ನೇ ನಾವು ಇವು ನಮ್ಮ ಆಯ್ಕೆ ಎಂದು ಮತ್ತೆ ಹೇಳಲು ಕಲಿತೆವು ಅಷ್ಟೇ. ಪ್ರಜ್ಞಾಪೂರ್ವಕವಾಗಿ ಬಹಳ ಯೋಚನೆ ಮಾಡಿ ಯಾವುದೋ ಚಳವಳಿಗೆ ಸೇರಿಕೊಳ್ಳಬಾರದೆಂದೇನಿಲ್ಲ ನಿಜ. ಆದರೆ, ನಮ್ಮ ಯೋಚನೆಗಳೂ ಪೂರ್ತಿಯಾಗಿ ನಮ್ಮವು ಆಗಿರುವುದಿಲ್ಲವಲ್ಲ. ಅವುಗಳೂ ಯಾರಿಂದಲೋ ಯಾವುದರಿಂದಲೋ ಪ್ರಭಾವಿತವಾಗಿರುತ್ತವೆ. ಅಂದರೆ ಪ್ರಜ್ಞಾಪೂರ್ವಕತೆಯೂ ಪೂರ್ತಿಯಾಗಿ ಪ್ರಜ್ಞಾಪೂರ್ವಕವಾಗಿರುವುದಿಲ್ಲ! ಮೂಲತಃ ಒಂದು ಸೆಳೆತ ಇದ್ದೇ ಇರುತ್ತದೆ. ಇರಬೇಕು. ಅದು ನಮ್ಮ ಸನ್ನಿವೇಶದಲ್ಲಿಯೇ ಇರುತ್ತದೆ. ಹಾಗಾಗಿ ನಮಗದು ಅಧಿಕೃತವಾಗಿ, ನಮ್ಮ ಅನುಭವವಾಗಿ ಕಾಣಿಸುತ್ತದೆ. ಅಧಿಕೃತವಾಗಿ ಕಾಣಿಸದೆ ಅದರ ಪರವಾಗಿ ಹೋರಾಡುವ ಪ್ರವೃತ್ತಿ ಹುಟ್ಟಿಕೊಳ್ಳುವುದಿಲ್ಲ.

◆ **'ನಿಧಾನಶ್ರುತಿ' ಎಂಬುದು ನಿಮ್ಮ ಜೀವನ ಕ್ರಮದಲ್ಲಿಯೇ ಇದೆ. ಆಧುನಿಕ ಬದುಕು ಗಡಿಯಾರದ ಮುಳ್ಳುಗಳ ಜೊತೆ ಓಡುತ್ತಿರುವಾಗ ನಿಮ್ಮ ಬದುಕನ್ನು ಹೇಗೆ ಸಮೀಕರಿಸಿಕೊಳ್ಳುತ್ತೀರಿ?**

ಹಾ! ನನ್ನ 'ಶ್ರುತಿ' ನಿಮಗೆ ಹೊಳೆದದ್ದು ಸಂತೋಷ! ನೋಡಿ. ನಾವು ಕೃಷಿಕರು. 'ಕೃಷಿ' ಕಾಯುವುದನ್ನು ಕಲಿಸಿಯೇ ಕಲಿಸುತ್ತದೆ. ಭತ್ತದ ಸಸಿ ತೆನೆಯೊಡೆಯಬೇಕಾದರೆ ನಾಲ್ಕು ತಿಂಗಳು. ಅಡಕೆಯ ಸಸಿಯಲ್ಲಿ ಗೊಂಚಲು ಇಣುಕಬೇಕಾದರೆ ನಾಲ್ಕು ವರ್ಷ. ದುಡಿಮೆಯ ಜೊತೆಗೆ ಕಾಯುವುದೇ ಕೃಷಿ ಬದುಕಿನ ಕಾಯಕ! ಕಾಯುವ ಪ್ರಕ್ರಿಯೆಯನ್ನು ದ್ರುತಗತಿಯಲ್ಲಿ ತೋರಿಸಲಾಗುತ್ತದೆಯೆ? ಮೊಟ್ಟೆಯ ಮೇಲೆ ಕಾವು ಕೂತ ಕೋಳಿಯನ್ನು ನಿಮಗೆ ಭಾಗ್ಯವಿದ್ದರೆ ತದೇಕ ನೋಡಿ. ಅದು ಕಾಲವನ್ನು ತನ್ನ ಮೈಬಿಸಿಯಲ್ಲಿ ಎಣಿಸಿಕೊಳ್ಳುತ್ತಿದೆ ಮತ್ತು ಮೊಟ್ಟೆಯೊಳಗಿನ ಜೀವಕ್ಕೆ ತನ್ನ ಎಣಿಕೆಯನ್ನು ಕಲಿಸುತ್ತಿದೆ! ಮೊಟ್ಟೆಯೊಡೆಯುವ 'ಕಾಲ'ವನ್ನು 'ಬೇಗ' 'ಬೇಗ' ಮಾಡಲಾಗುತ್ತದೆಯೆ? ಕಾಲವನ್ನು ಹೂವಿನಂತೆ ಅರಳಿಕೊಳ್ಳುವುದಕ್ಕೆ ಬಿಡಿ, ಮುಳ್ಳುಗಳಂತೆ ಎದೆಯಲ್ಲೇಕೆ ನೆಟ್ಟುಕೊಳ್ಳುವಿರಿ ಎಂದು ಹೇಳಬೇಕೆನಿಸುತ್ತದೆ. 'ಹೊಂಚು ಹಾಕುವುದು' ಎಂಬ ಪದ ಕೇಳಿದ್ದೀರಲ್ಲಾ. ಹೊಂಚು ಹಾಕುವುದೆಂದರೆ, ಕಾಯುವುದು; ತನ್ನ 'ಬಲಿ' ತನ್ನ ಬಳಿ ಬರುವುದನ್ನು ಕಾಯುವುದು. ಕಾಲವೇ ತನಗೆ ಸಹಕರಿಸುವುದನ್ನು ಅರಿಯುವುದು! 'ಮಲೆಗಳಲ್ಲಿ ಮದುಮಗಳು'ವಿನಲ್ಲಿ ಓದುಗರಿಗೆ ಕುವೆಂಪು ಕೊಡುವ ಸೂಚನೆ ಇದು – 'ಇಲ್ಲಿ ಅವಸರವೂ ಸಾವಧಾನದ ಬೆನ್ನೇರಿದೆ' ಎಂದು. ಮಲೆನಾಡಿನ ಬದುಕಿನ ಲಯವನ್ನು ಹಿಡಿದ ಈ ನುಡಿಗಟ್ಟು ನನಗೆ ಬಲು ಇಷ್ಟ.

◆ **'ಪರಂಪರೆ' ಮತ್ತು 'ಆಧುನಿಕತೆ'ಯನ್ನು ಪರಸ್ಪರ ವಿರುದ್ಧವೆಂಬಂತೆ ನೋಡಲಾಗುತ್ತಿದೆ. ಈ ಬಗೆಗೆ ನಿಮ್ಮ ಅಭಿಪ್ರಾಯ?**

ಪರಸ್ಪರ ವಿರುದ್ಧವಾಗಿ ನೋಡುವುದು– ಕಪ್ಪು ಬಿಳಿಯಾಗಿ ನೋಡುವುದು– ಎರಡು ಕ್ಯಾಂಪ್‌ಗಳಲ್ಲಿ ನೋಡುವುದು ತರ್ಕಕ್ಕೆ ಅನುಕೂಲ. ಖಂಡನೆ, ಮಂಡನೆಗಳಿಗೆ ಅನುಕೂಲ. ಆದುದರಿಂದ ತರ್ಕಕ್ಕೆ ಇಷ್ಟ. ಎಲ್ಲ ಕಾಲಗಳಲ್ಲೂ ಈ ವಿಚಾರವಿತ್ತೆನ್ನುವುದು ಒಂದು ಸೋಜಿಗ. ನೋಡಿ. 'ನೂತನ' ಎನ್ನುವ ಪದ ಅತ್ಯಂತ ಪ್ರಾಚೀನವಾದ ಪದ! ಇದೊಂದು ಸೋಜಿಗವಲ್ಲವೆ? ಎಷ್ಟು ಪ್ರಾಚೀನ ಎಂದು ಕೇಳುವಿರಾ. ವೇದಕಾಲದಷ್ಟು ಹಿಂದಿನ ಪದ ಅದು. ವೇದಗಳಲ್ಲೆಲ್ಲ ಋಗ್ವೇದವು ಪ್ರಾಚೀನ ಎಂದು ಎಲ್ಲ ವಿದ್ವಾಂಸರ ಅಭಿಪ್ರಾಯ. ಅಂಥ ಋಗ್ವೇದದ ಮೊದಲ ಸೂಕ್ತದಲ್ಲೇ 'ನೂತನ' ಎಂಬ ಪದವಿದೆ!

'ಅಗ್ನಿ: ಪೂರ್ವೇಭಿಃ ಋಷಿಭಿ: ಈಡ್ಯ: ನೂತನೈ: ಉತ' ಎಂಬ ಋಕ್.

ಅಗ್ನಿಯು ಪೂರ್ವಿಕರಾದ ಋಷಿಗಳಿಂದ ಹೇಗೆ ಸ್ತುತ್ಯನೋ ಹಾಗೇ ನೂತನರಿಂದಲೂ ಸ್ತುತ್ಯರ್ಹನು ಎನ್ನುವುದು ಈ ಋಕ್ಕಿನ ಅರ್ಥ.

ಪೂರ್ವಿಕರು, ನೂತನರು ಎಂದು ಕಾಲಕ್ರಮದಲ್ಲಿ ನೋಡಿದ್ದು, 'ನೂತನ' ಎಂಬ ಪದವನ್ನು ಟಂಕಿಸಿದ್ದು, ನೂತನರನ್ನೂ ಋಷಿಗಳೆಂದು ಕರೆದದ್ದು – ಇವೆಲ್ಲ ಒಂದು ಸಂಸ್ಕೃತಿಯನ್ನು ಒಳಗಿಂದಲೇ ಅರ್ಥಮಾಡಿಕೊಳ್ಳುವುದಕ್ಕೆ ಸೂಚಕಗಳು. ಅದಿರಲಿ.

ಎಲ್ಲ ಕವಿಗಳಿಗೂ ತಮ್ಮ ಕಾವ್ಯ ಹೊಸ ಕಾವ್ಯವೆನ್ನಿಸಬೇಕೆಂಬ ತೀವ್ರವಾದ ಆಕಾಂಕ್ಷೆ ಇರುತ್ತದೆ!